ರಮೇಶ ಜ. ಬೊಂಗಾಳೆ, ಬೈಲಹೊಂಗಲ

ಮನುಷ್ಯರಿಗೂ, ಮರಗಳಿಗೂ ವ್ಯತ್ಯಾಸವೇನು?



ಮರದಿಂದ ಪೋಷಣೆ, ಮನುಜನಿಂದ ಶೋಷಣೆ.

ರಾಮಸ್ವಾಮಿ, ಭೀಮನಕಟ್ಟೆ

ಗುಂಡಿ ಮೊದಲೋ, ರಸ್ತೆ ಮೊದಲೋ?

ಗುಂಡಿಯೇ. ಗುಂಡಿಗಳನ್ನು ಟಾರಿನ/ಕಾಂಕ್ರೀಟಿನ ಸರದಿಂದ ಪೋಣಿಸಿದರೆ ರಸ್ತೆ.

ಬಿ.ಆರ್. ಉಷಾ, ಅಮೆರಿಕ

'ನಿನ್ನ ಪ್ರಶ್ನೆಗೇಕೆ ಉತ್ತರಿಸುತ್ತಿಲ್ಲ?' ಎಂದು ನನ್ನ ಅಮೆರಿಕನ್ ಫ್ರೆಂಡ್ಸ್ ಕೇಳುತ್ತಿರುವರಲ್ಲ?

ತಿಳಿಯಿತು. ಅವರೂ ಶುದ್ಧ ಕನ್ನಡಿಗರಂತೆಯೇ ಕುರಿತೋದದೆಯುಂ ಟೀಕಾಸ್ತ್ರ ಪ್ರಯೋಗ ಪರಿಣತರ್.

ಉದಯ ಸಿದ್ರಾಯ ಕಾಕತಿ, ಬೆಳಗಾವಿ

ಜಗದ ಯಾವುದೇ ಭಾಗದಲ್ಲೂ ಕೇಳಿಸುವ ಒಂದೇ ತರಹದ ಕನಿಷ್ಠ ಮೂರು ಶಬ್ದಗಳು ಯಾವುವು?



ಹರಿಯುವ ನೀರಿನ ಝುಳುಝುಳು, ಪಕ್ಷಿಗಳ ಕಲರವ, ಪ್ರೇಮಿಗಳ ಪಿಸುನುಡಿ.

ಸುರೇಶ್ ಬಿ.ವಿ. ಬೆಂಗಳೂರು

ಜೀವನದ ಮುಖ್ಯ ಪಾಠಗಳನ್ನು ಯಾವುವು ಕಲಿಸುತ್ತವೆ?

ಸದ್ಯದಲ್ಲಂತೂ ಗೂಗಲಮ್ಮ, ಎಕ್ಸಪ್ಪ, ವಾಟ್ಸಪ್ ಡೂಡ್, ರೆಡಿಟ್ ಡುಡೆಟ್...

ರಾಜೇಶ್ವರಿ ಮಯ್ಯ, ಪುತ್ತೂರು

ಶಾಲಾ ವಾರ್ಷಿಕೋತ್ಸವದಲ್ಲಿ ಮಕ್ಕಳೆದುರು ಗಂಟೆಗಟ್ಟಲೆ ಭಾಷಣ ಬಿಗಿಯುವ ಅತಿಥಿಗೆ ಯಾವುದರಲ್ಲಿ ಹೊಡೆಯಬೇಕು?

ಅಂತಹವನ ಭಾಷಣಕ್ಕೆ ಹೊಡೆಯಬೇಕಾದ್ದು ನೀವಲ್ಲ, ಮಕ್ಕಳು. ಹೊಡೆಯಬೇಕಾದ್ದು – ಚಕ್ಕರ್.

ಬಿ. ಚಂದ್ರೇಗೌಡ, ಬೆಂಗಳೂರು

ದಾಂಪತ್ಯದಲ್ಲಿ ಸಂಗೀತದ ಪಾತ್ರ ಹೇಗಿರಬೇಕು?

'ಮನಿ' ಇದ್ದೂ, ಮೋಹನ ರಾಗದಂತಿರಬೇಕು.

ಪಿ. ಜಯವಂತ ಪೈ, ಕುಂದಾಪುರ

ಸರ್ಕಾರಿ ಕಚೇರಿಗಳಲ್ಲಿ ನುಂಗಪ್ಪಗಳೇ ಜಾಸ್ತಿ ಆಗಿದ್ದಾರಲ್ಲ?

'ಬಂಡಲಿದೆಕೋ ಬ್ರೀಫ್‌ಕೇಸಿದೆಕೋ; ಕೋಟಿ ಕೋಟಿ ನಗದು ಇದೆಕೋ' ಎನ್ನುವ 'ಪಾಪಕೋಟಿ'ಗಳೇ ಕಾರಣವಂತೆ.

ರಾಜೀವ್ ಎನ್. ಮಾಗಲ್, ಸಕಲೇಶಪುರ

ಕೆಲವರ ಮನೆಗೆ ಹೋದಾಗ 'ಇದನ್ನು ನಿಮ್ಮ ಮನೆ ಅಂತಾನೇ ತಿಳೀರಿ' ಅನ್ನೋದರ ಅರ್ಥವೇನು?

'ನಿಮ್ಮ ಮನೆಗೆ ಬಂದವರು ಕೊಳಕು ಮಾಡಿದರೆ ನಿಮಗೆ ಇಷ್ಟವಾಗದಂತೆಯೇ' ಎಂಬ ಒಳಾರ್ಥ.

ಉಷಾ ಸೋಗಲ್, ತುರಹಳ್ಳಿ

ವಿಘ್ನೇಶ್ವರ ಬ್ರಹ್ಮಚಾರಿ. ಆದರೆ ಲಗ್ನಪತ್ರಿಕೆಯಲ್ಲಿ ಮೊದಲಿಗೆ ವಿಘ್ನೇಶ್ವರನ ಫೋಟೊ ಹಾಕುವ ಕಾರಣ?

ಶುದ್ಧ ಬ್ರಹ್ಮಚಾರಿ ಮಾತ್ರ ವಧುವಿಗೆ ಲೈನ್ ಹೊಡೆಯದೆ ನಿರ್ವಿಘ್ನವಾಗಿ ಮದುವೆ ನಡೆಸಬಲ್ಲನೆಂದು.

ಕೆ.ಸಿ. ಸತ್ಯನಾರಾಯಣ, ದೊಡ್ಡಬಳ್ಳಾಪುರ

ಕೆಂಪೇಗೌಡರ ಕಾಲದ ನಿಧಿಯು ವಿಧಾನಸೌಧದ ಅಡಿಯಲ್ಲಿ ದೊರಕಿದರೆ?

ಶೌರ್ಯ, ಪ್ರಾಮಾಣಿಕತೆಗಳೇ ಅಂದಿನ ನಿಧಿ. ಅವು ಈಗಿನವಕ್ಕೆ ಪ್ರಯೋಜನವಿಲ್ಲ.

ಎಂ.ಸಿ. ಧನ್ಯತಾ, ಬೆಂಗಳೂರು

ನಿದ್ರೆಯನ್ನು 'ನಿದ್ರಾದೇವಿ' ಎನ್ನುವುದೇಕೆ?

ನಿದ್ರೆಯೂ ದೇವಿಯಂತೆಯೇ ತನಗಿಷ್ಟ ಬಂದಾಗಲೇ ಪ್ರತ್ಯಕ್ಷ ಆಗುವುದರಿಂದ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

ಮಂತ್ರಿಗಳು ಸತ್ಯ ಹೇಳುವ ಸಮಯದಲ್ಲಿ ಮೌನವಾದರೆ?

ಅವರಿಗೆ ಕಿಕ್‌ಬ್ಯಾಕ್ ಸಿಕ್ಕಿದೆ ಎಂದರ್ಥ.

## ಬಹುಮಾನಿತ ಪ್ರಶ್ನೆ

ಅನಸೂಯಾ ಟಿ. ಕೇದಿಗೆಮನೆ

ಇಲ್ಲೊಬ್ಬಳು ಎರಡೂ ಕೈಗಳಿಗೆ ಗೋರಂಟಿ ಹಾಕಿಕೊಂಡರೂ ಗೆಳತಿಯ ನೆರವಿಂದ ಮೊಬೈಲ್ ನೋಡುತ್ತಿರುವಳಲ್ಲ?

ಚಟದಾಸಿ! ಮನಕ್ಕೆ ಅಂಟುವ ಚಟ ಕೈಗಂಟುವ ಗೋರಂಟಿಗಿಂತ ದೃಢ.

ಷಣ್ಮುಖ ಎಸ್.ಹೆಚ್. ಹಳೇಬಾತಿ

ಕಲಬೆರಕೆ ಆಹಾರ ನಿಯಂತ್ರಣ ಆಗುತ್ತಿಲ್ಲ. ಯಾಕೆ?

ನಿಯಂತ್ರಣ ಇಲಾಖೆಯಲ್ಲಿ ಖಳಬೆರಕೆ ಆಗಿರುವುದೇ ಕಾರಣ.

ಮಹಾವೀರ ಕಾಸರ, ಶಿವಮೊಗ್ಗ

ಯುದ್ಧ ಜಯಿಸಿ ಬಂದವನಿಗಿಂತ ಜೈಲಿನಿಂದ ಬೇಲ್ ಮೇಲೆ ಹೊರಬಂದವನಿಗೆ ಹೆಚ್ಚು ಜೈಕಾರ. ಏಕೆ?

ಸೈನಿಕ ಕತೆ ಕೊಟ್ಟಾನು; ಇವನು ಕಂತೆಕಂತೆ ಕೊಡುವನಲ್ಲ!

ಕಾಳೀಹುಂಡಿ ಶಿವಕುಮಾರ್, ಮೈಸೂರು

ಸತಿಪತಿಯರಿಬ್ಬರೂ ಸಂಗೀತಗಾರರಾಗಿದ್ದರೆ ಸಂಸಾರ ಹೇಗಿರತ್ತೆ?



ರಾಗ ಹೊಂದಿದರೆ ರಾಗವರ್ಧಿನಿ; ಹೊಂದದಿದ್ದರೆ ಶುದ್ಧ ಸಾವೇ ರೀ.

ಎನ್.ವಿ. ಶ್ರೀನಿವಾಸ್, ಮೈಸೂರು

ಗುಲಾಬಿ ಹೂ, ಸಿಗರೇಟು, ವಿಸ್ಕಿ, ಕೆಮ್ಮು ಸೇರಿದರೆ ಎಂಥ ಪಾಕ ಸಿದ್ಧವಾಗುತ್ತದೆ?

ಕುಂಭೀಪಾಕ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ

ಆಶೀರ್ವಾದ, ಆರೈಕೆ, ಹಾರೈಕೆಗಳಲ್ಲಿ ಯಾವುದು ಶ್ರೇಷ್ಠ?

ಆರೈಕೆಯೇ. ಮಿಕ್ಕೆರಡು ಇಲ್ಲದೆಯೂ ಕುರಿಗಳು ಸುಪುಷ್ಟವಾಗಿರುತ್ತವೆ.

■ ರಾಮ್